ಈ ಸುದ್ದಿಯನ್ನು ಮುಟ್ಟಿಸಿದ್ದು ನಮ್ಮ ಸೆಕ್ಯುರಿಟಿ ಮತ್ತು ಕಟ್ಟಡದಲ್ಲಿದ್ದ ಇತರರು. ಐ ವಾಸ್ ಟೂ ಷಾಕ್ಡ್...."

"ಈ ಕಥೆಯನ್ನು ನೀನು ನಿರಾಕರಿಸುತ್ತಿಲ್ಲ. ನಿರಾಕರಿಸುವ ಪ್ರಯತ್ನವನ್ನೂ ಮಾಡುತ್ತಿಲ್ಲ."

"ಇಲ್ಲ. ಅದರಲ್ಲಿ ನನಗೆ ಅರ್ಥ ಕಾಣಲಿಲ್ಲ. ಇದರಲ್ಲಿದ್ದ ಒಂದು ಮಾರ್ಕೇಸಿಯನ್ ಇನೆವಿಟಬಿಲಿಟಿ – ಕಾರಣವೇನೇ ಇದ್ದರೂ ಅವನ ಸಾವು ಅನಿವಾರ್ಯವಾಗಿತ್ತು ಅನ್ನುವ ನಂಬಿಕೆಯ ಮೇಲೆಯೇ ನಾನು ಮುಂದುವರೆದಿದ್ದೀನಿ. ನೀನು ಈಗ ಈ ಪ್ರಶ್ನೆಗಳನ್ನು ಕೇಳಿ ನನಗೆ ತುಂಬಾ ತೊಂದರೆ ಕೊಡುತ್ತಿದ್ದೀಯ..."

"ಸಾರಿ. ಕ್ಷಮೆಯಿರಲಿ. ನಿನಗೆ ಗೊತ್ತು. ಅಷ್ಟು ದೂರದಿಂದ ಬಂದಿರೋದು ನಿನ್ನ ಜೊತೆಗಿರಲು. ನಿನಗೆ ಸಹಾಯ ಮಾಡಲು. ನಾನು ಹೇಳುವುದು ಇಷ್ಟೇ. ಕೌಂಟರ್ ಫ್ಯಾಕ್ಚುವಲ್‌ಗೆ ಹೋಗಬೇಡ. ಹಾಗಾಗಿದ್ದರೆ ಹೀಗಾಗುತ್ತಿತ್ತಾ ಅನ್ನುವ ಪ್ರಶ್ನೆಯೇ ಬೇಡ. ಹೊರಗಿನ ಕಥನವನ್ನೂ ಬದಲಾಯಿಸಬೇಡ. ಆದರೆ ನಿನ್ನೊಳಗಿನ ಸತ್ಯವನ್ನು ಮಾತ್ರ ಇಲ್ಲವಾಗಿಸಬೇಡ. ಇದನ್ನು ಅಪಘಾತವೆಂದೇ ಪರಿಗಣಿಸು. ಆಗ ನೀನು ಈ ವ್ಯಾಪಾರದ ಬಗ್ಗೆ ಏನು ಮಾಡಬೇಕು. ಇದನ್ನು ಕೈವಶಮಾಡಿಕೊಳ್ಳುತ್ತಿರುವ ಆ ಇಬ್ಬರ ಬಗ್ಗೆ ಹೇಗೆ ವರ್ತಿಸುತ್ತೀಯ ಅನ್ನುವುದರ ಬಗ್ಗೆ ಒಂದು ಸ್ಪಷ್ಟತೆ ಬರುತ್ತದೆ. ಆಗ ನನ್ನ ಅಲ್ಲಾಹು... ನಿನ್ನ ದೇವರು, ನಿನಗೆ ಸರಿಯಾದ ದಾರಿಯನ್ನು ಕಾಣಿಸುತ್ತಾನೆ."

"ಇದು ಆತ್ಮಹತ್ಯೆ ಅಲ್ಲವೇ ಅಲ್ಲ... ಇದು ಅಪಘಾತವೇ ಅಂತ ನೀನು ಹೇಳುತ್ತಿದ್ದೀಯ. ನಾನೂ ಅದನ್ನೇ ನಂಬಬೇಕು. ಅಂದರೆ, ಈಗ ಇಂದು ನೀನಿರುತ್ತಿರುವಾಗ ಮುಕುಂದನೂ ನಮ್ಮ ಜೊತೆಗಿದ್ದು ಆ ಸೂಯಿಸೈಡ್ ಪತ್ರದ ಬಗ್ಗೆ – ಅದನ್ನು ಯಾಕೆ ಬರೆದ ಎನ್ನುವುದರ ಬಗ್ಗೆ ಚರ್ಚಿಸಬಹುದಿತ್ತು ಅನ್ನುತ್ತೀಯ.. ಹೌದಾ?"

"ಬೇಡ. ಆ ದಾರಿಯಲ್ಲಿ ಅಷ್ಟು ದೂರ ಹೋಗಬೇಡ. ಬರೇ ಇದು ಅಪಘಾತವೇ ಎನ್ನುವ ನಂಬಿಕೆಯನ್ನು ನಿನ್ನ ಮನಸ್ಸಿನಲ್ಲಿ ಇಟ್ಟುಕೋ. ಅಷ್ಟು ಸಾಕು. ಇದು ಆ ಇಬ್ಬರು ಮಾಡಿದ ಕೊಲೆಯೂ ಅಲ್ಲ. ನೀನು ಕಾರಣವಾದ ಸಾವೂ ಅಲ್ಲ. ಆತ್ಮಹತ್ಯೆಯೂ ಅಲ್ಲ. ಕೇವಲ ಅಪಘಾತ. ಅಷ್ಟನ್ನು ನಂಬು. ಈಗ ನಿನ್ನ ಮುಂದಿನ ಹೆಜ್ಜೆಗಳ ಬಗ್ಗೆ ಚರ್ಚೆ ಮಾಡೋಣ."

"ನೋ. ಐ ನೀಡ್ ಎ ಬ್ರೇಕ್. ಇದು ಕಷ್ಟದ ಮಾತು. ಐ ನೀಡ್ ಎ ಡ್ರಿಂಕ್. ಎ ಸ್ತಿಫ್ ವನ್. ಸಿಂಗಲ್ ಮಾಲ್ಟ್ ಆನ್ ದ ರಾಕ್ಸ್. ಇಷ್ಟು ಸಹಜನಾಗಿ, ನನ್ನನ್ನು ಅಫೆಂಡ್ ಮಾಡದೇ, ನನ್ನ ಮನಸ್ಸಿಗೆ ಅವಮಾನವಾಗದಂತೆ, ನನ್ನಲ್ಲಿ ಪಾಪಪ್ರಜ್ಞೆ ಬರದಂತೆ, ನೋಡಿಕೊಳ್ಳುತ್ತಲೇ ಇಷ್ಟು ಮೂಲಭೂತ ಪ್ರಶ್ನೆಗಳನ್ನು ಕೇಳಿದ್ದೀಯ. ಅಲ್ಲೋಲಕಲ್ಲೋಲದ ಪ್ರಶ್ನೆಗಳನ್ನು ಕೇಳುತ್ತಲೇ ಸಮಚಿತ್ತದಿಂದ ಇದ್ದೀಯಲ್ಲಾ. ಹೇಗೆ?"

"ಐ ವಿಲ್ ಹ್ಯಾವ್ ಎ ಫ್ರೆಶ್ ಲೈಮ್ ಸೋಡಾ. ನಿಂಬಿರಸ ಅಷ್ಟೇ..."

■



# ಪಾರಿಜಾತದ ಸುಗಂಧ ಮಾತನಾಡಿದೆ

ಹಿತವಾದ ಘಮಲು, ವಿಶಿಷ್ಟ ಚೆಲುವು, ಬಿಳುಪಾದ ದಳಗಳು, ಆಕರ್ಷಕ ಬಣ್ಣ... ಇಷ್ಟು ವಿಶೇಷಣಗಳನ್ನು ಹೊತ್ತು 'ಸಂಜೆಯ ರಾಣಿ'ಯಂತೆ ಮೆರೆಯುವ ಈ ಹೂವು ಪಾರಿಜಾತ. ಮನೆಯಂಗಳದಲ್ಲಿ ಸಂಜೆಯ ವೇಳೆಗೆ ಸುತ್ತಮುತ್ತಲಿನ ಇಡೀ ಪರಿಸರವನ್ನು ಹಿಡಿದಿಡುವಷ್ಟು ಸುಗಂಧವನ್ನು ಹರಡುತ್ತಾ, ತನ್ನ ವಿಶಿಷ್ಟ ಸುವಾಸನೆಯಿಂದಲೇ ಎಲ್ಲರನ್ನೂ ಸೆಳೆಯುವ ಗುಣ ಇದೆ ಈ ಪುಷ್ಪಕ್ಕೆ.



ಕೇಸರಿ ಬಣ್ಣದ ತೊಟ್ಟು, ಬಿಳಿ ಬಣ್ಣದ ದಳಗಳಿಂದ ಕೂಡಿ ಹೂವಿನ ಮಧ್ಯೆ ಕೇಸರಿ ಬಣ್ಣದ ಬೊಟ್ಟನ್ನೂ ಹೊಂದಿರುವ ಈ ಹೂವು ಬೆಳಗ್ಗಿನ ವೇಳೆಗೆ ಸುವಾಸನೆ ಅಳಿದು ಹೋಗದಿದ್ದರೂ ಹೂವು ಕೆಲ ಹೊತ್ತಿನಲ್ಲೇ ಬಾಡಿ ಹೋಗುತ್ತದೆ.

'ನೈಟ್ ಫ್ಲವರಿಂಗ್ ಕೋರಲ್ ಜಾಸ್ಮಿನ್' ಎಂದು ಕರೆಯುವ ಇದಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ. ಭಗವದ್ಗೀತೆ ಪುರಾಣ, ವಿಷ್ಣು ಪುರಾಣ, ಮಹಾಭಾರತಗಳಲ್ಲಿ ಪಾರಿಜಾತ ಹೂವಿನ ಉಲ್ಲೇಖವಿದೆ. ಇಂದ್ರನ ತೋಟದಿಂದ ಕೃಷ್ಣ ಪಾರಿಜಾತ ಹೂವನ್ನು ಕದ್ದು ತಂದಿದ್ದನಂತೆ. ಇದನ್ನು 'ಪಾರಿಜಾತಾಪಹರಣ' ಎಂದು ಕರೆಯಲಾಗುತ್ತಿದೆ. ಉತ್ತರ ಪ್ರದೇಶದ ಬಾರ್ಬಂಕಿ ಜಿಲ್ಲೆಯ ಕಿಂಟೂರ್ ಎಂಬ ಪುಟ್ಟ ಗ್ರಾಮದಲ್ಲಿ ಪಾರಿಜಾತ ಗಿಡ ಮೊದಲು ಕಾಣಿಸಿಕೊಂಡಿತ್ತು ಎನ್ನಲಾಗುತ್ತಿದೆ. ಮಹಾಭಾರತ ಕಾಲದಲ್ಲಿ ಈ ಗಿಡ ಮೊದಲು ಪತ್ತೆಯಾಯಿತು ಎನ್ನುತ್ತದೆ ಇತಿಹಾಸ.

## ಔಷಧಕ್ಕೂ ಪಾರಿಜಾತ

ಪಾರಿಜಾತ ಗಿಡ ಔಷಧೀಯ ಗುಣಗಳನ್ನು ಒಡಲಲ್ಲಿ ತುಂಬಿಕೊಂಡಿದೆ. ಇದನ್ನು ಮೂಲವ್ಯಾಧಿ, ಮಲಬದ್ಧತೆ, ಕಾಮಾಲೆ (ಜಾಂಡೀಸ್), ಮಲೇರಿಯಾ, ಒಣ ಕೆಮ್ಮು, ರಿಂಗ್ ವರ್ಮ್ ಮುಂತಾದ ಕಾಯಿಲೆಗಳನ್ನು ಗುಣಪಡಿಸಲು ಬಳಸಲಾಗುತ್ತದೆ. ಹೊಟ್ಟೆ ಹುಳ ನಿವಾರಣೆ, ತೀವ್ರ ಜ್ವರ, ಸ್ತ್ರೀಸಂಬಂಧಿ ರೋಗಗಳ ನಿವಾರಣೆಗೂ ಇದು ಉಪಕಾರಿ. ತಲೆಹೊಟ್ಟು ಸಮಸ್ಯೆ ಇದ್ದವರಿಗೂ ಪಾರಿಜಾತ ಉಪಯುಕ್ತ.

ಸೌಂದರ್ಯ ವರ್ಧನೆಗೂ ಪಾರಿಜಾತದ ಕೊಡುಗೆ ಅಪಾರ. ಇದರ ಹೂವಿನಿಂದ ತೆಗೆದ ಎಸ್ಸೆನ್ಸ್‌ನಿಂದ ಸುಗಂಧ ದ್ರವ್ಯ ತಯಾರಿಸುತ್ತಾರೆ.

■ ಯು.ಎ.